ಉಪಾಧ್ಯಕ್ಷರು :- ಈಗ ವೈ. ರಾಮಕೃಷ್ಣರವರು ಮಾತನಾಡಿ. ದಯಮಾಡಿ ತಾವು ಸಂಕ್ಷಿಪ್ತವಾಗಿ ಮಾತನಾಡಿ. ಏಕೆಂದರೆ ಶೂನ್ಯ ವೇಳೆ ಬಹಳಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ. ಬಹಳಷ್ಟು ಸದಸ್ಯರು ಇವತ್ತು ಅಂದರೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸದನವನ್ನು ಮುಗಿಸಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಶೂನ್ಯ ವೇಳೆಯಲ್ಲಿ ಹೆಚ್ಚಿಗೆ ಸಮಯ ಕಳೆಯದ ಹಾಗೆ ತಾವು ಕೇವಲ ಪ್ರಸ್ತಾಪ ಮಾಡಬೇಕಷ್ಟೆ. ಇದು ಡಿಬೇಟ್ ಆಗಬಾರದು. ತಾವು ದಯವಿಟ್ಟು 2 ನಿಮಿಷಗಳಲ್ಲಿ ಪ್ರಸ್ತಾಪ ಮಾಡಿ.

(ಈ) ದಲಿತ ಕ್ರಿಸ್ತರಿಗೆ ಮೀಸಲಾತಿ ಮಸೂದೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್) :- ಮಾನ್ಯ ಉಪಾಧ್ಯಕ್ಷರೇ, ಇದು ಜುಲೈ 25 ರಂದು ಬಂದಂಥ ವರ್ತಮಾನ. "ದಲಿತ ಕ್ರಿಸ್ತರಿಗೆ ಮೀಸಲಾತಿ" ಕುರಿತಂತೆ ಪ್ರಸಕ್ತ ಸಂಸತ್ ಅಧಿವೇಶನದಲ್ಲಿ ಒಂದು ಮಸೂದೆಯನ್ನು ಹೊರತರುವುದಾಗಿ ಪ್ರಧಾನಿ ಹೆಚ್. ಡಿ. ದೇವೇಗೌಡರವರು ಬುಧವಾರ ತಿಳಿಸಿದ್ದಾರೆ. ಈ ಕುರಿತಂತೆ ರಾಜ್ಯ ಸರ್ಕಾರದೊಡನೆ ಮಾತುಕತೆ ನಡೆಸುತ್ತಿರುವುದಾಗಿಯೂ ಅವರು ತಿಳಿಸಿದ್ದಾರೆ. ಡೆನಿಶ್ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಚರ್ಚುಗಳ ಒಕ್ಕೂಟವು ಇತ್ತೀಚೆಗೆ ಪ್ರಧಾನಿಯವರನ್ನು ಭೇಟಿ ಮಾಡಿದಾಗ ಪ್ರಧಾನಿಯವರು ಈ ಭರವಸೆಯನ್ನು ನೀಡಿದರೆಂದು ಅಧಿಕೃತ ಮೂಲಗಳಿಂದ ಗೊತ್ತಾಗಿದೆ. ಈ ವಿಚಾರ ನಿನ್ನೆಯ ದಿವಸ ಪತ್ರಿಕೆಗಳಲ್ಲಿ ಬಂದಿದೆ. ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಮಂತ್ರಿಗಳು ರಾಜ್ಯ ಸರ್ಕಾರದೊಡನೆ ಸಮಾಲೋಚನೆ ಮಾತುಕತೆ ನಡೆಸುತ್ತೇನೆಂದು ಹೇಳಿದ್ದಾರೆ. ಅವರು ಕರ್ನಾಟಕ ರಾಜ್ಯ ಸರ್ಕಾರದ ಜೊತೆಯಲ್ಲಿ ಏನಾದರೂ ಮಾತುಕತೆ ನಡೆಸಿದ್ದಾರೆಯೇ? ಮಾತುಕತೆ ನಡೆಸಿಲ್ಲ. ಮಾತುಕತೆ ನಡೆಸದೇ ಇದ್ದರೆ, ಪ್ರಧಾನಿಗಳು ತಮ್ಮ ಅಭಿಪ್ರಾಯ ಕೇಳಿದರೆ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಈ ಶಾಸನ ಸಭೆಯ ಮೂಲಕ ವ್ಯಕ್ತಪಡಿಸಬೇಕೇ? ಅಥವಾ ಈ ಮೀಸಲಾತಿಯಿಂದ ಚುನಾಯಿತರಾದಂಥ ಶಾಸಕರ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಕರೆದು ಅವರ ಅಭಿಪ್ರಾಯವನ್ನು ಪಡೆದುಕೊಂಡು ತಾವು ಅಭಿಪ್ರಾಯವನ್ನು ಮಂಡಿಸುತ್ತೀರಾ? ಅಥವಾ ಕ್ಯಾಬಿನೆಟ್‌ನಲ್ಲಿಯೇ ನಮ್ಮ ಅಭಿಪ್ರಾಯವಿಲ್ಲದೆ ಡಿಶಿಷನ್ ತೆಗೆದು ಕೊಂಡು ಏನಾದರೂ ತಾವು ಕನ್‌ವೇ ಮಾಡುತ್ತೀರಾ? ಏಕೆಂದರೆ ಇದಕ್ಕೆ ಇಡೀ ದಲಿತರ ವಿರೋಧವಿದೆ. ಅದನ್ನು ವ್ಯಕ್ತಪಡಿಸಬೇಕಾದರೆ ನಮ್ಮ ಮನಸ್ಸನ್ನು ತಾವು ಅರಿತು ಎಲ್ಲಾ ರಾಜಕೀಯ ಪಕ್ಷಗಳಲ್ಲಿರತಕ್ಕಂಥ ಎಲ್ಲಾ ದಲಿತ ಶಾಸನ ಸಭಾಸದಸ್ಯರನ್ನು ಸೇರಿಸಿ ತಾವು ಒಂದು ಅಭಿಪ್ರಾಯವನ್ನು ಕೊಡುತ್ತೀರಾ? ಇದರ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಷಯವನ್ನು ಈಗ ಗಮನಕ್ಕೆ ತಂದಿದ್ದಾರೆ. ಅವರು ಸಲಹೆ ಕೊಟ್ಟಂತೆ ಈ ಬಗ್ಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಿದರೆ ನಾನು ದಲಿತರು ಎಲ್ಲರನ್ನು ಕರೆಯುತ್ತೇನೆ. ಬೇರೆ ವಿರೋಧ

ಪಕ್ಷದ ನಾಯಕರನ್ನು ಕರೆದು, ನಮ್ಮ ಸರ್ಕಾರದ ಅಭಿಪ್ರಾಯವನ್ನು ಸಂಪುಟಕ್ಕೆ ತೆಗೆದು ಕೊಂಡು ಹೋಗುವುದಕ್ಕೆ ಮುಂಚೆ ಇದನ್ನೆಲ್ಲಾ ತಿಳಿದುಕೊಂಡು ಆ ನಂತರ ನಾನು ಕಳುಹಿಸಿಕೊಡುತ್ತೇನೆ.

(ಉ) ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಕಟ್ಟಡದ ನಿರ್ಮಾಣ ಹಂತದಲ್ಲಿ 3 ಜನರ ಸಾವು.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) :- ಮಾನ್ಯ ಉಪಾಧ್ಯಕ್ಷರೇ, ಮೊನ್ನೆ ದಿವಸ ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಒಂದು ಕಟ್ಟಡವನ್ನು ನಿರ್ಮಾಣ ಮಾಡುವಾಗ ಆ ಕಟ್ಟಡದ ಕೆಲಸ ಮಾಡುವಂಥ 3 ಜನ ಕಾರ್ಮಿಕರು ಪ್ರಾಣ ಬಿಟ್ಟಿದ್ದಾರೆ. 18 ವರ್ಷದ ಇನ್ನೊಬ್ಬ ಹುಡುಗ ಆಸ್ಪತ್ರೆಯಲ್ಲಿ ಇದ್ದಾನೆ. ಆತ ಯಾವ ಗಳಿಗೆಯಾಲ್ಲಾದರೂ ಸಾಯಬಹುದು. ಒಬ್ಬ ಹೆಂಗಸಿಗೆ ಕಾಲು ಮುರಿದು ಹೋಗಿದೆ. ನಮ್ಮ ಗೃಹ ಸಚಿವರು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಇದು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ 94 ನೇ ವಾರ್ಡಿಗೆ ಬರುತ್ತದೆ. ಆ ಕಟ್ಟಡ ಏನು ಕಟ್ಟಿಸುತ್ತಾ ಇದ್ದಾರೆ ಆ ವ್ಯಕ್ತಿ ಕಾರ್ಪೊರೇಷನ್ನಿನಿಂದ ಯಾವುದೇ ವಿಧವಾದಂಥ ಪ್ಲಾನ್‌ನ್ನು ತೆಗೆದುಕೊಂಡಿಲ್ಲ. ನಿನ್ನೆ ಸಂಜೆಯವರೆಗೆ ಕಾರ್ಪೊರೇಷನ್‌ನಿಂದ ಯಾವ ಇಂಜಿನೀಯರೂ ಕೂಡ ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಿಲ್ಲ. ಆ ಪರಿಸ್ಥಿತಿ ಅಲ್ಲಿ ಇದೆ. ಅಲ್ಲಿ ಸತ್ತಂಥವರಿಗೆ ಮಂತ್ರಿಗಳು 50 ಸಾವಿರ ರೂಪಾಯಿ ಕೊಡಬೇಕೆಂದು ಅಲ್ಲಿ ಜನರು ಹೇಳಿದರು. ನಿನ್ನೆ ಸಂಜೆಯವರೆಗೆ ಅಲ್ಲಿ ಯಾರಿಗೂ ಹಣ ಒದಗಿಸಿಲ್ಲ. ಶವಸಂಸ್ಕಾರಕ್ಕೆ ಸಹಾಯ ಮಾಡಿದ್ದಾರೆ. ಆ ಕಟ್ಟಡವನ್ನು ಕಟ್ಟಿದಂಥ ವ್ಯಕ್ತಿ ಇದಕ್ಕೆ ಮುಂಚೆ ಒಂದು ಸಲ ಬಿ.ಡಿ.ಎ. ಎಂದು ಬರೆದಂಥ ಒಂದು ದೊಡ್ಡ ಬೋರ್ಡ್ ಬಿದ್ದು ಹೋಗಿ ಅಲ್ಲಿ ಒಬ್ಬ ಸತ್ತಿದ್ದರು. ಆವರಿಗೂ ಕೂಡ ಆತ ಸಹಾಯ ಮಾಡಿಲ್ಲ. ದಯಮಾಡಿ ಸಚಿವರು ಇದರ ಕಡೆಗೆ ಗಮನಹರಿಸಬೇಕು.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಆ ಸ್ಥಳಕ್ಕೆ ನಾನು ನಿನ್ನೆ ಹೋಗಿದ್ದೆ. ನಿನ್ನೆ ಬೆಳಿಗ್ಗೆ ಒಂದು ಸಲ ಮತ್ತು ಸಾಯಂಕಾಲ ಒಂದು ಸಲ ಹೋಗಿದ್ದೆ. ನಿನ್ನೆ ರಾತ್ರಿ 8 ಗಂಟೆಗೆ ಅಲ್ಲಿಗೆ ಹೋದಾಗ ಅವರ ಸಂಬಂಧಿಕರು ಇನ್ನೂ ಸ್ಮಶಾನದಿಂದ ವಾಪಾಸ್ಸು ಬಂದಿರಲಿಲ್ಲ. ಅವರ ಹತ್ತಿರದ ಸಂಬಂಧಿಕರು ಇದ್ದಾರೆ, ಅವರು ಬರಲಿ ಎಂದು ಪೋಲೀಸರೇ ಸ್ವಲ್ಪ ಸಮಯಾವಕಾಶ ಕೇಳಿದರು. ಅವರಿಗೆ ಏನು 50 ಸಾವಿರ ರೂಪಾಯಿ ಸಮವಾಗಿ ಕೊಡುವಂಥದ್ದು ಇದೆ ಅದನ್ನು ಇವತ್ತು ನಾನು ಹೋಗಿ ಹಂಚಿಕೊಟ್ಟು ಬರುತ್ತೇನೆ.

ಶ್ರೀ ಬಿ. ಮುನಿಯಪ್ಪ :- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ಒಂದು ಕಟ್ಟಡವನ್ನು ಕಟ್ಟಬೇಕಾದರೆ ಮಹಾನಗರ ಪಾಲಿಕೆಯಿಂದ ಪ್ಲಾನ್ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಪ್ಲಾನ್ ತೆಗೆದುಕೊಂಡಿಲ್ಲ. ಅದೇ ಸಂದರ್ಭದಲ್ಲಿ ಅನಾಹುತವಾದ ಮೇಲೆ ಆ ಸ್ಥಳಕ್ಕೆ ಯಾವುದೇ ಒಬ್ಬ